02ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 619/2018**

| | |
|---|---|
| ಹೆಸರುಃ  ಸುನೀಲ್ ರಾಜ್ | ಚಾಸಾಃ 8 |
| ತಂದೆಯ ಹೆಸರುಃ  ವೆಂಕಟರಾಜ್ | ಪ್ರಾಸಾ: 11 |
| ವಯಸ್ಸುಃ  36  ವರ್ಷ | |
| ಉದ್ಯೋಗಃ  ಏನು ಮಾಡುತ್ತಿಲ್ಲ | |
| ವಾಸ ಸ್ಥಳಃಲಕ್ಕವಳ್ಳಿ ಗ್ರಾಮ,ತರೀಕರೆ  ತಾಃ  ಚಿಕ್ಕಮಗಳೂರು ಜಿಲ್ಲೆ | |
| ಸಾಕ್ಷಿಗೆ ದಿನಾಂಕಃ02-12-2024  ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2010 ರಿಂದ 2018ರವರೆಗೂ ಚನ್ನಗಿರಿಯ ಐ ಐ ಎಫ್ ಎಲ್ ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸಿರುತ್ತೇನೆ.

2016-17 ನೇ ಸಾಲಿನಲ್ಲಿ ಚಾಸಾ-10 ಮತ್ತು 3 ನೇ ಆರೋಪಿ ನಮ್ಮ ಬ್ಯಾಂಕಿನಲ್ಲಿ ಚಿನ್ನವನ್ನು ಅಡವಾಗಿಟ್ಟು ಲೋನ್ ನ್ನು ಪಡೆದಿರುತ್ತಾರೆ. ಸದರಿಯವರು ಸಕಾಲಕ್ಕೆ ಬಡ್ಡಿಯನ್ನು ಪಾವತಿಸದ  ಕಾರಣ ಅಡವವಿಟ್ಟ ಬಂಗಾರದ ಆಭರಣಗಳನ್ನು ನಿಯಮಾನುಸಾರ ಹರಾಜು ಮಾಡಲಾಗಿರುತ್ತದೆ.  ತದ ನಂತರ ಪೊಲೀಸರು ನಮ್ಮ ಶಾಖೆಗೆ ಬಂದು ತನಿಖೆಯನ್ನು ಮಾಡಿದ್ದು ಸದರಿ ತನಿಖೆಯಿಂದ 3 ನೇ ಅರೋಪಿ ಮತ್ತು ಚಾಸಾ-10 ರವರು ಅಡವಿಟ್ಟ ಚಿನ್ನ ಕಳ್ಳತನದ ಚಿನ್ನವೆಂದು ಕಂಡುಬಂದಿರುತ್ತದೆ.  ಸದರಿ ಚಿನ್ನವನ್ನು ಮಾರಾಟ ಮಾಡಿ ಬಂದ ಹಣವನ್ನು ನ್ಯಾಯಾಲಯಕ್ಕೆ ಕಟ್ಟಬೇಕೆಂದು ಚಾಸಾ-19 ರವರು ತಿಳಿಸಿರುತ್ತಾರೆ. ಸದರಿ ವಿಚಾರವನ್ನು ನಮ್ಮ ಮೇಲಾಧಿಕಾರಿಗಳ ಗಮನಕ್ಕೆ ತಂದಿರುತ್ತೇವೆ. ನಂತರ ಮುಖ್ಯ ಕಚೇರಿಯಿಂದ 2 ಡಿಡಿ ಗಳು ನಮ್ಮ ಶಾಖೆಗೆ ಬಂದಿದ್ದು ಸದರಿ ಡಿಡಿ ಗಳನ್ನು ಚಾಸಾ-19 ರವರಿಗೆ ಕೊಟ್ಟು ಪಂಚನಾಮೆಯನ್ನು ಜರುಗಿಸಲಾಗಿರುತ್ತದೆ.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ದಿಃ 16-09-2016 ರ Sanction letter ಆಗಿದ್ದು, ಸದರಿ ಪತ್ರದಂತೆ ಚಾಸಾ-10 ರವರು ನಮ್ಮ ಶಾಖೆಗೆ ಹಾಜರಾಗಿ ಸದರಿ ಪತ್ರದಲ್ಲಿ ಕಾಣಿಸುತ್ತಿರುವ ಸರವನ್ನು ಅಡವಿಟ್ಟು ಲೋನ್ ಪಡೆಯಲು ಬಂದಿರುತ್ತಾರೆ. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿ ಒಪ್ಪಿದ ಮೇರೆಗೆ ಅದನ್ನು ನಿಪಿ-10 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿ ಇರುವ ಫೊಟೋ ನಾಗೇಂದ್ರನಾಗಿದ್ದು ಸದರಿಯವರು ಸಹನಮ್ಮ ಶಾಖೆಗೆ ಲೋನ್ ಪಡೆಯಲು ಬಂದಿದ್ದರು. ಸದರಿ ದಾಖಲೆಯನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದೆ

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಅಮಾನತು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-7(ಸಿ) ಎಂದು ಗುರುತಿಸಲಾಯಿತು. ಸದರಿ ಅಮಾನತು ಪಂಚನಾಮೆಯನ್ನು 2018 ನೇ ಸಾಲಿನಲ್ಲಿ ನಮ್ಮ ಕಂಪನಿಯಿಂದ ಪೊಲೀಸರಿಗೆ ನೀಡಿದ ಡಿಡಿ ಯ ಸಲುವಾಗಿ ಕುರಿತು ಮಾಡಿದ ಅಮಾನತು ಪಂಚನಾಮೆಯಾಗಿರುತ್ತದೆ. ಸದರಿ ಡಿಡಿ ಗಳ ಸಂಖ್ಯೆಯನ್ನು ನನಗೆ ಹೇಳಲಾಗುವುದಿಲ್ಲ. ಸದರಿ ಡಿಡಿಗಳು ಹಸ್ತಾಂತರಿಸಿದ ದಿನಾಂಕ ನನಗೆ ನೆನಪಿಲ್ಲ. ಸದರಿ ದಿನಾಂಕದಂದು ನನ್ನ ಜೊತೆ ಬೇರೆಯಾರು ಇದ್ದರು ಎಂದು ನನಗೆ ಗೊತ್ತಿಲ್ಲ

ಸದರಿ ಎಲ್ಲಾ ವಿಚಾರಗಳ ಕುರಿತು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ಮಹಜರು ಮತ್ತು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಮಹಜರು ಮತ್ತು ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು ಮಹಜರು ಮತ್ತು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

***ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ***

ನಿಪಿ-7ಕ್ಕೆ ಸಹಿಯನ್ನು ನಾನು ದಿಃ 04-09-2018ರಂದು ನಮ್ಮ ಸಂಸ್ಥೆಯ ಕಚೇರಿಯಲ್ಲಿ ಚಾಸಾ-11 ಮತ್ತು 12 ರವರ ಸಮಕ್ಷಮ ಚಾಸಾ-19 ರವರಿಗೆ 2 ಡಿಡಿ ಗಳನ್ನು ಹಾಜರುಪಡಿಸಿದ ಸಲುವಾಗಿ ಸಮಯ 11.45 ರಿಂದ 12.20ರವರೆಗೆ ಜರುಗಿಸಲಾದ

ಪಂಚನಾಮೆ ಎಂದರೆ ಸರಿ. ಸದರಿ ಸಮಯಕ್ಕೆ ಹಾಜರುಪಡಿಸಿದ ಡಿಡಿ ವಿವರ ಪೇ ಕಾಲಂನಲ್ಲಿ ಗುರುವ ಬೋವಿ ಎಂದು ನಮೂದಾಗಿದ್ದು ಡಿಡಿ ನಂ 654545 ಮತ್ತು ರೂ.39112/- ಎಂದು, ಮತ್ತು ಇನ್ನೊಂದು ಡಿಡಿ ಸಂಖ್ಯೆ 654546 ಮತ್ತು ರೂ.87,932/- ಎಂದು ನಮೂದಾಗಿತ್ತು ಎಂದರೆ ಸರಿ. ಸದರಿ 2 ಡಿಡಿ ಗಳ ದಿಃ 29-08-2018 ಎಂದು ನಮೂದಾಗಿತ್ತು ಎಂದರೆ ಸರಿ.

ನಾನು ಕೊಟ್ಟಿರುವ ಹೇಳಿಕೆಯಲ್ಲಿ ದಿಃ 18-08-2016ರಂದು ಚನ್ನಗಿರಿ ನಗರದ ವಾಸಿ 3ನೇ ಆರೋಪಿ ನಾಗೇಂದ್ರ ನಮ್ಮ ಕಚೇರಿಗೆ ಬಂದು ಅವರ ಬಳಿ ಇದ್ದ ಒಂದು ಬಂಗಾರದ ನೆಕ್ಲೇಸ್ ನ್ನು ಅಡವಿಟ್ಟು Loan Account No.GL6702590 ರಲ್ಲಿ ಅಡವಾಗಿ ಪಡೆದು ಅವರಿಗೆ ರೂ.29,000/-ಗಳನ್ನು ಬಂಗಾರದ ವೇಲಿನ ಸಾಲವಾಗಿ ವಿತರಿಸಿರುತ್ತೇವೆ ಎಂದರೆ ಸರಿ.

ದಿಃ16-09-2016ರಂದು ಚಾಸಾ-10 ರವರು ಬಂಗಾರದ ಸರವನ್ನು ಹಾಜರುಪಡಿಸಿ ಲೋನ್ ಪಡೆಯಲು ಬಂದಿದ್ದುಸದರಿ ಬಂಗಾರದ ಸರವನ್ನು ಅಡಮಾನವಾಗಿಟ್ಟುಕೊಂಡು Loan Account No.GL6815930ರಂತೆ ರೂ.66,000/-ಗಳನ್ನು ಸಾಲವಾಗಿ ಕೊಟ್ಟಿರುತ್ತೇವೆ ಎಂದರೆ ಸರಿ. 13-01-2017 ಮತ್ತು 18-01-2017ರಂದು ಸದರಿ 2 ಲೋನ್ ಖಾತೆಗಳ ವಾಯಿದೆ ಮುಗಿದ ಕಾರಣ ನಿಯಾಮಾನುಸಾರ ಸದರಿ ಚಿನ್ನವನ್ನು ಹರಾಜು ಮಾಡಿರುತ್ತೇವೆ ಎಂದರೆ ಸರಿ. ದಿಃ21-04-2017ರಂದು ಚಾಸಾ-19ರವರು ನಮ್ಮ ಕಚೇರಿಗೆ ಸದರಿ ನಿಪಿ-8 ಮತ್ತು 10 ರ ಕುರಿತು ಪತ್ರವನ್ನು ರವಾನಿಸಿದ್ದು ಸದರಿ ಆಭರಣಗಳು ಕಳ್ಳತನಕ್ಕೆ ಸಂಬಂಧಿಸಿದ ಆಭರಣಗಳು ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಸದರಿ ಸಮಯಕ್ಕೆ ನಾನು ಮತ್ತು ಚಾಸಾ-9 ರವರು ಠಾಣೆಗೆ ಹೋಗಿ ವಿಚಾರಿಸಿದಾಗ 3ನೇ ಆರೋಪಿಯೇ ನಮ್ಮ ಬ್ಯಾಂಕಿಗೆ ಹಾಜರಾಗಿ ನಿಪಿ-8 ರಂತೆ ಬಂಗಾರದ ನೆಕ್ಲೇಸ್ ನ್ನು ಅಡವಾಗಿಟ್ಟು ಸಾಲ ಪಡೆದ ವಿಚಾರವನ್ನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಆರೋಪಿಯನ್ನುನೋಡಿದರೆ ಗುರುತಿಸುತ್ತೇನೆ ಎಂದು ನಾನು ನನ್ನ ಹೇಳಿಕೆಯಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅರೋಪಿಯನ್ನು ಈಗ ನಾನು ಗುರುತಿಸಲು ಆಗುವುದಿಲ್ಲ.

**(ಮಧ್ಯಹ್ನದ ಊಟದ ಸಮಯವಾದ್ದರಿಂದ ಪಾಟೀ ಸವಾಲಿಗೆ ಮಧ್ಯಾಹ್ನಕ್ಕೆ ಮುಂದೂಡಲಾಯಿತು).**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

ಸಾಕ್ಷಿಗೆ ದಿನಾಂಕಃ02-12-2024ರಂದು ಮದ್ಯಾಹ್ನ 4.20 ಗಂಟೆಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ಟಿ ವಕೀಲರಿಂದಃ</u>**

ನಾನು ಐ ಐ ಎಫ್ ಎಲ್ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಹಾಗಾಗಿ ನಾನು ಸದರಿ ಸಂಸ್ಥೆಯಲ್ಲಿ ಸದರಿ ಅವಧಿಯಲ್ಲಿ ಮ್ಯಾನೇಜರಿ ಆಗಿ ಕೆಲಸ ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಚಿನ್ನದ ಸಾಲವನ್ನು ಮಂಜೂರು ಮಾಡುವ ಮುನ್ನ ಅವರ ಪೂರ್ವಾ ಪರ ವಿವರಗಳನು ಪರಿಶೀಲಿಸುತ್ತೇವೆ ಎಂದರೆ ಸರಿ. ಅದೇ ರೀತಿ ಗ್ರಾಹಕರಿಂದ ಪಡೆದ ದಾಖಲೆಗಳ ಬಗ್ಗೆಯೂ ಸಹ ನಮೂದಿಸುತ್ತೇವೆ ಎಂದರೆ ಸರಿ. 3ನೇ ಆರೋಪಿಗೆ ಸಂಬಂಧಿಸಿದಂತೆ ಆಧಾರಕಾರ್ಡ್ ನು ಈ ಪ್ರಕರಣದಲ್ಲಿ ಪಡೆದಿರುತ್ತೇವೆ ಮತ್ತು ಸದರಿ ಆಧಾರ್ ಕಾರ್ಡ್ ನ್ನು ನಾವು ಸದರಿ ಸಮಯಕ್ಕೆ ನಾವು ಪರಿಶೀಲಿಸಿರುತ್ತೇವೆ. ಆದರೆ ಈಗ ಹೇಳಲಾಗುವುದಿಲ್ಲ. ಆರೋಪಿ ನಮ್ಮ ಶಾಖೆಗೆ ಬಂಗಾರದ ಆಭರಣಗಳನ್ನು ಅಡವಿಟ್ಟು ರೂ.68,000/-ಕ್ಕೆ ಒಂದು ಸಾಲವನ್ನು ಮತ್ತು ರೂ.26,000/-ಕ್ಕೆ ಒಂದು ಸಾಲವನ್ನು ಪಡೆದಿರುತ್ತಾನೆ. ರೂ.26,000/-ಗಳಿಗೆ ನೆಕ್ಲೇಸ್ ನ್ನು ಮತ್ತು 68000/-ಗಳಿಗೆ ಬಂಗಾರದ ಚೈನ್ ನ್ನು ಅಡವಿಟ್ಟಿರುತ್ತಾನೆ, ಸದರಿ ವಿಚಾರದ ಕುರಿತು ನಾನು ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿ ಸದರಿ ದಿನಾಂಕದಂದು ನಮ್ಮ ಕಚೇರಿಗೆ ಬಂದಿಲ್ಲ ಮತ್ತು ನಾನು ಹೇಳಿದಂತೆ ಯಾವುದೇ ಚಿನ್ನವನ್ನು ಅಡವಿಟ್ಟಿಲ್ಲ ಎಂದರೆ ಸರಿಯಲ್ಲ. 3ನೇ ಆರೋಪಿಯೊಂದಿಗೆ ಬಂದ ಚಾಸಾ-10ರವರ ಹೆಸರು ಮತ್ತು ವಿಳಾಸ

ನನಗೆ ಗೊತ್ತಿಲ್ಲ. ನಮ್ಮ ಶಾಖೆಯಲ್ಲಿ ಬಂಗಾರವನ್ನು ಅಡವಿಟ್ಟ ವ್ಯಕ್ತಿಯನ್ನು ನನಗೆ ಗುರುತಿಸಲು ಆಗುವುದಿಲ್ಲ. ನಾನು ಚಾಸಾ-19 ರವರಿಗೆ ನೀಡಿದ ಡಿಡಿ ಗಳ ವಿವರವನ್ನು ನನಗೆ ಹೇಳಲಾಗುವುದಿಲ್ಲ. ಸದರಿ ವಿಚಾರದ ಕುರಿತು ಮಹಜರನ್ನು 2018ರಲ್ಲಿ ಮಾಡಿರುತ್ತಾರೆ. ಸದರಿ ಮಹಜರನ್ನು ಯಾರು ಬರೆದರು ಎಂದು ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಸದರಿ ಮಹಜರಿನ ಚೆಕ್ಕುಬಂದಿಯನ್ನು ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಸದರಿ ಮಹಜರಿನ ಸಮಯಕ್ಕೆ ನನ್ನೊಂದಿಗೆ ಯಾರು ಇದ್ದರು ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಡಿಡಿ ಗಳು ಗುರುವಬೋವಿರವರ ಹೆಸರಿನಲ್ಲಿದ್ದು ಸದರಿ ಗುರುವಬೋವಿ ನಮ್ಮ ಸಂಸ್ಥೆಯ ಮುಖ್ಯಸ್ಥರಾಗಿದ್ದರು. ನಿರ್ದಿಷ್ಟ ದಿನಾಂಕ ಹೇಳಲಾಗುವುದಿಲ್ಲ. ಸದರಿ ಡಿಡಿ ಗಳ ಒಟ್ಟು ಮೊತ್ತವನ್ನು ನನಗೆ ಹೇಳಲಾಗುವುದಿಲ್ಲ. ಸಾಮಾನ್ಯವಾಗಿ ಲೋನ್ ನ್ನು ಮಂಜೂರು ಮಾಡುವ ಸಮಯಕ್ಕೆ ಗ್ರಾಹಕರ ಭಾವಚಿತ್ರವನ್ನು ಸ್ಕ್ಯಾನ್ ಮಾಡಲಾಗುತ್ತದೆ ಎಂದರೆ ಸರಿ.

ನಿಪಿ-8ರಲ್ಲಿ ಕಾಣಿಸುತ್ತಿರುವ ವ್ಯಕ್ತಿಯ ಚಿತ್ರ ಸ್ಪಷ್ಟವಾಗಿ ಕಾಣಿಸುತ್ತಿಲ್ಲ ಎಂದರೆ ಸರಿ. ನಿಪಿ-8 ಮತ್ತು 10 ರಲ್ಲಿ ನಮ್ಮಕಚೇರಿಯ ಮೊಹರು ಇಲ್ಲ ಎಂದರೆ ಸರಿ. ಸದರಿ ನಿಪಿ-8 ಮತ್ತು 10 ರಲ್ಲಿ ಗ್ರಾಹಕರ ಸಂಪೂರ್ಣ ವಿಳಾಸ ಇಲ್ಲ ಎಂದರೆ ಸರಿ. ಹಾಗಾಗಿ ನಿಪಿ-8 ಮತ್ತು 10 ನ್ನು ನಾವೇ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 3 ನೇ ಆರೋಪಿ ನಮ್ಮಕಚೇರಿಗೆ ಯಾವತ್ತಿಗೂ ಬಂದಿಲ್ಲ, ಮತ್ತು ನಿಪಿ-8 ಮತ್ತು 10 ರಂತೆ ಯಾವುದೇ ಸಾಲವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ-19 ರವರು ನಮ್ಮಶಾಖೆಗೆ ಯಾವ ದಿನಾಂಕದಂದು ಬಂದಿದ್ದರು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಹಾಗಾಗಿ ಚಾಸಾ19 ರವರು ನಮ್ಮಶಾಖೆಗೆ ಬಂದಿಲ್ಲ ಮತ್ತು ಯಾವುದೇ ಮಹಜರನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ನಿಪಿ-8 ಮತ್ತು 10 ರಲ್ಲಿ ಕಾಣಿಸುತ್ತಿರುವ ಬಂಗಾರದ ಆಭರಣಗಳನ್ನು ನಮ್ಮ ಶಾಖೆಯಲ್ಲಿ ಅಡವಿಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ8 ಮತ್ತು 10 ರಲ್ಲಿನ ವಸ್ತುಗಳಿಗೂ ಮತ್ತು 3 ನೇ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

02ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 619/2018**

| | |
|---|---|
| ಹೆಸರುಃ  ಕರಿಬಸಪ್ಪ ಎಂ | ಚಾಸಾಃ 7 |
| ತಂದೆಯ ಹೆಸರುಃ  ಮೂರ್ತಿ | ಪ್ರಾಸಾ: 10 |
| ವಯಸ್ಸುಃ  27  ವರ್ಷ | |
| ಉದ್ಯೋಗಃ  ಕೂಲಿ ಕೆಲಸ | |
| ವಾಸ ಸ್ಥಳಃ ಮಲ್ಲೇಶ್ವರಂ ಗ್ರಾಮ, ಚನ್ನಗಿರಿ ತಾಃ | |
| ಸಾಕ್ಷಿಗೆ ದಿನಾಂಕಃ03-07-2023 ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ಮತ್ತು 6 ನನ್ನ ಸಂಬಂಧಿಕರು.

ದಿಃ 29-03-2017ರಂದು ಪೊಲೀಸರು ಚಾಸಾ-1 ರವರ ಮನೆಯಲ್ಲಿ ಅದಂತಹ ಕಳ್ಳತನದ ವಿಚಾರವಾಗಿ ಆರೋಪಿತರನ್ನು ಚಾಸಾ-1 ರವರ ಮನೆ ಬಳಿ ಕರೆತಂದಿರುತ್ತಾರೆ. ಪೊಲೀಸರು ಚಾಸಾ-1 ರವರ ಮನೆ ಬಳಿ ಕರೆತಂದಿದ್ದಂತಹ ವ್ಯಕ್ತಿಗಳ ಹೆಸರು ಅಫ್ರೋಜ್, ನಾಗೇಂದ್ರ ಮತ್ತು ಕುಮಾರ ಎಂಬ ವ್ಯಕ್ತಿಗಳನ್ನು ಕರೆತಂದಿರುತ್ತಾರೆ. ನಾನು ಆರೋಪಿತರನ್ನು ನೋಡಿಲ್ಲ.

ಈ  ಕುರಿತು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು  ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು  ಅನುಮತಿ ನೀಡಲಾಯಿತು.)**

***ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ***

ದಿಃ 15-08-2016ರಂದು ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿತ್ತು ಎಂದರೆ ಸರಿ. ಸದರಿ ಆರೋಪಿತರು ಮನೆಯ ಮೇಲ್ಭಾವಣಿ ಹೆಂಚನ್ನು ತೆಗೆದು ಮನೆಯಾಳಗೆ ನುಗ್ಗಿ ಬೀರುವಿನ ಬಾಗಿಲು ಹೊಡೆದು ಅದರಲ್ಲಿದ್ದ 35ಗ್ರಾಂ ತೂಕದ ಬಂಗಾದರ ಚೈನ್ 20 ಗ್ರಾಂ ತೂಕದ ನೆಕ್ಲೇಸ್ ಕಳುವಾಗಿತ್ತು ಎಂದರೆ ಸರಿ. ದಿಃ 29-03-2017ರಂದು ಪೊಲೀಸರು ಯಾರೋ ಕಳ್ಳರನು ಕರೆದುಕೊಂಡು ಬಂದು ಚಾಸಾ-1 ರವರ ಮನೆಯನ್ನು ತೋರಿಸಿದಾಗ ಕಳ್ಳರು ನಾವು ಚಾಸಾ-1 ರವರ ಮನೆಯಲ್ಲಿ ಕಳ್ಳತನ ಮಾಡಿರುವುದಾಗಿ ನುಡಿಯುತ್ತಾರೆ ಎಂದರೆ ಸರಿ. ಸದರಿ ಆರೋಪಿತರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಆರೋಪಿತರು ಕಳುವು ಮಾಡಿದ ವಸ್ತುಗಳನ್ನು ಚನ್ನಗಿರಿಯ ಐ ಐ ಎಫ್ ಎಲ್ ಗೋಲ್ಡ್ ಲೋನ್ ಕಚೇರಿಯಲ್ಲಿ ಅಡವಿಟ್ಟ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ಟಿ ವಕೀಲರಿಂದಃ</u>**

ಚಾಸಾ-1 ಮತ್ತು 6 ರವರು ನನ್ನ ಸಂಬಂಧಿಕಾರಾದ ಕಾರಣ ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಕಳ್ಳತನವಾದ ನಿರ್ದಿಷ್ಟ ದಿನಾಂಕ ನನಗೆ ಗೊತ್ತಿಲ್ಲ. ಕಳುವಾದ ಮಾಲಿನ ಕುರಿತು ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ. ಕಳುವಾದ ವಸ್ತುಗಳ ತೂಕ ಮತ್ತು ಮೌಲ್ಯ ನನಗೆ ಗೊತ್ತಿಲ್ಲ. ಚನ್ನಗಿರಿ ಪೊಲೀಸರು ಆರೋಪಿತರನ್ನು 29-03-2017 ರಂದು ಚಾಸಾ-1 ರವರ ಮನೆ ಬಳಿ ಕರೆತಂದರು. ಸದರಿ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಈ ಕುರಿತು ನನ್ನ ಹೇಳಿಕೆಯಲ್ಲಿ ನಾನು ಹೇಳಿಲ್ಲ. ಆರೋಪಿತರೇ ಕಳುವು ಮಾಡಿದ ಕುರಿತು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಆರೋಪಿತರು ಚಾಸಾ-1 ರವರ ಮನೆ ಬಳಿ ಕರೆತಂದಾಗ ನನ್ನ ಒಳಗೊಂಡಂತೆ ಪೊಟೋ ತೆಗೆದ ಬಗ್ಗೆ ನನಗೆ ಗೊತ್ತಿಲ್ಲ. ಪೊಲೀಸರು ನಾನು ಹೇಳಿದಂತೆ ಯಾವುದೇ ಅರೋಪಿತರನ್ನು ಚಾಸಾ-1 ರವರ ಮನೆ ಬಳಿ ಕರೆತಂದಿಲ್ಲದೆ ಇದ್ದರು ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ದಿಃ 29-03-2017 ರ ನನ್ನ ಹೇಳಿಕೆಯಲ್ಲಿ ನಾನು ತೋರಿಸಿದ ವಿಳಾಸದಲ್ಲಿ ಕೂಲಿ ಕೆಲಸ ಮಾಡಿಕೊಂಡು ನನ್ನ ಮಕ್ಕಳೊಂದಿಗೆ ಜೀವನ ಮಾಡುತ್ತಿದ್ದೆನೆ ಎಂದು ಉಲ್ಲೇಖ ಇದೆ ಎಂದರೆ ಸಾಕ್ಷಿ ನನಗೆ ಮದುವೆಯಾಗಿಲ್ಲ ಎಂದು ನುಡಿಯುತ್ತಾರೆ. ನನಗೆ ಈ ಪರಕರಣದ ಕುರಿತು ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಚಾಸಾ-1 ಮತ್ತು 4 ರವರ ಮಾತನ್ನು ಕೇಳಿ

ಆರೊಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ, ಕಳುವಾದ ಮಾಲಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

02ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 619/2018**

| | |
|---|---|
| ಹೆಸರುಃ ಸುಮಿತ್ರಾ | ಚಾಸಾಃ 6 |
| ಗಂಡನ  ಹೆಸರುಃ   ಗುರುವ ಬೋವಿ | ಪ್ರಾಸಾ: 9 |
| ವಯಸ್ಸುಃ   31  ವರ್ಷ | |
| ಉದ್ಯೋಗಃ ಗೃಹಿಣಿ | |
| ವಾಸ ಸ್ಥಳಃ ಮಲ್ಲೇಶ್ವರಂ ಗ್ರಾಮ, ಚನ್ನಗಿರಿ ತಾಃ | |
| ಸಾಕ್ಷಿಗೆ ದಿನಾಂಕಃ03-07-2023 ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ನನ್ನ ಗಂಡ,

ದಿಃ 10-08-2016 ರಂದು ನಾನು ಗರ್ಭಿಣಿಯಾಗಿದ್ದ ಕಾರಣ ತರೀಕೆರೆಯ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿದ್ದು ಅಲ್ಲಿ ವೈದ್ಯರು ರಕ್ತಹೀನತೆ ಇದ್ದ ಕಾರಣ ಚಿಕಿತ್ಸೆಗಾಗಿ 5  ದಿನ ಅಲ್ಲಿಯೇ ಒಳರೋಗಿಯಾಗಿ ಚಿಕಿತ್ಸೆ ಪಡೆಯಲು ಸೂಚಿಸಿದ್ದರು. ಅಲ್ಲಿಂದ   ನಂತರ ದಿಃ 15-08-2016 ರಂದು ನಾನು ಮನೆಗೆ ಹಿಂದಿರುಗಿದಾಗ ಮನೆ ಬಾಗಿಲು ತೆರೆದಿತ್ತು ಮತ್ತು ಬೀರುವಿನ ಬಾಗಿಲು ತೆಗೆದಿತ್ತು. ಅದರಲ್ಲಿನ ಲಾಕರ್ ನಲ್ಲಿ ಇಟ್ಟಿದ್ದ 35 ಗ್ರಾಂ ತೂಕದ ಚಿನ್ನದ ಲಾಂಗ್ ಚೈನ್, 20 ಗ್ರಾಂ ತೂಕದ ಚಿನ್ನದ ನೆಕ್ಲೇಸ್ ಕಳುವಾಗಿತ್ತು. ತಕ್ಷಣ ನಾನು, ಚಾಸಾ-1 ಮತ್ತು 7 ರವರೊಂದಿಗೆ ಚನ್ನಗಿರಿ ಪೊಲೀಸ್ ಠಾಣೆಗೆ ಬಂದು ದೂರು ನೀಡಿರುತ್ತೇವೆ.

ಸದರಿ ಘಟನೆಯಾದ ನಂತರ ದಿಃ 29-03-2017 ರಂದು ಪೊಲೀಸರು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ಕಳ್ಳರು ಸಿಕ್ಕದ್ದಾರೆ ಎಂದು ಹೇಳಿರುತ್ತಾರೆ, ಪೊಲೀಸರು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ಕಳ್ಳರು ಹೆಸರು ಅಫ್ರೋಜ್ ಅಹಮ್ಮದ್ ಮತ್ತು ಕುಮಾರ ಎಂದು ಹೇಳಿರುತ್ತಾರೆ, ಅವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತಾರೆ. ಸದರಿಯವರು ಕಳುವು ಮಾಡಿದ ವಸ್ತುಗಳನ್ನು ಚನ್ನಗಿರಿಯ ಐ ಐ ಎಫ್ ಎಲ್ ಗೋಲ್ಡ್ ಲೋನ್ ಕಚೇರಿಯಲ್ಲಿ ಅಡವಿಟ್ಟಿ ಬಗ್ಗೆ ತಿಳಿಸಿರುತ್ತಾರೆ. ಸದರಿ ವಸ್ತುಗಳನ್ನು ನಾವು ಬಿಡಿಸಿಕೊಂಡಿರುತ್ತೇವೆ,

ಈ ಕುರಿತು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತರನ್ನು ನಮ್ಮ ಮನೆಗೆ ಕರೆತಂದಾಗ ಮಾತ್ರ ನಾನು ನೋಡಿರುತ್ತೇನೆ. ಈಗ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆದರೆ ಸದರಿಯವರ ಹೆಸರಿನೊಂದಿಗೆ ಗುರುತಿಸುವುದು ಕಷ್ಟ ಎಂದು ಸಾಕ್ಷಿ ನುಡಿಯುತ್ತಾರೆ.

ಈ ದಿನ ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 3 ನೇ ಆರೋಪಿಯನ್ನು ನೋಡಿ 2ನೇ ಆರೋಪಿ ಎಂದು ಗುರುತಿಸಿರುತ್ತಾರೆ. 1 ಮತ್ತು 2 ನೇ ಅರೋಪಿ ಗೈರು ಹಾಜರಾದ ಕಾರಣ ಆರೋಪಿ ಪರ ವಕೀಲರು ಗುರುತಿಸುವಿಕೆಯ ಪ್ರಕ್ರಿಯೆಗೆ ತಕರಾರು ಇಲ್ಲ ಎಂದು ಹೇಳಿದ್ದರಿಂದ ಗುರುತಿಸುವಿಕೆಯ ಪ್ರಕ್ರಿಯೇಯನ್ನು ಕೈ ಬಿಡಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ಟಿ ವಕೀಲರಿಂದಃ**

ದಿಃ 10-08-2016 ರಂದು ನಾನು ಗರ್ಭಿಣಿಯಾಗಿದ್ದ ಕಾರಣ ತರೀಕೆರೆಯ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿ ದಾಖಲಾದ ಕುರಿತು ನಾನು ಪೊಲೀಸರಿಗೆ ಹೇಳಿಕೆಯಲ್ಲಿ ಹೇಳಿದ್ದೆನೆ

ಎಂದರೆ ಸರಿ. ಸದರಿ ಚಿಕಿತ್ಸೆ ಕುರಿತು ನಾನು ಪೊಲೀಸರಿಗೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ. ಯಾವುದೇ ದಾಖಲಾತಿ ನೀಡದೇ ಇರುವ ಕಾರಣ ನಾನು ಯಾವುದೇ ಚಿಕಿತ್ಸೆ ಪಡೆಯದೇ ಇದ್ದರು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ದಿಃ 15-08-2016ರಂದು ನಾನು ಮತ್ತು ಚಾಸಾ-1 ರವರು ನಮ್ಮ ಮನೆಗೆ ವಾಪಸ್ಸು ಬಂದಿರುತ್ತೇವೆ ಎಂದರೆ ಸರಿ. ನಾನು ಊರಿಗೆ ಹೋಗುವ ಮುಂಚೆ ಮನೆಗೆ ಬೀಗವನ್ನು ಹಾಕಿ ಹೋಗಿದ್ದೆನು. ಸದರಿ ಬೀಗ ನಾನು ಮನೆಗೆ ಹಿಂದಿರುಗಿದಾಗ ಒಡೆದಿರುತ್ತದೆ. ನಾನು ಈ ಕುರಿತು ನನ್ನ ಹೇಳಿಕೆಯಲ್ಲಿ ಹೇಳಿದ್ದೆನೆ ಎಂದರೆ ಸರಿ. ನಾನು ಪೋಲಿಸರಿಗೆ ನಾನು ಹೇಳಿದ ರೀತಿ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ. ನಮ್ಮ ಬೀರುವಿನಿಂದ ಕಳ್ಳತನವಾದ ವಸ್ತುಗಳ ಬಗ್ಗೆ ಯಾವುದೇ ಬಿಲ್ ಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಕಳುವಾದ ವಸ್ತುಗಳನ್ನು ಯಾವ ಅಂಗಡಿಯಿಂದ ಖರೀದಿಸಿದ್ದೇವೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ. ನಮ್ಮ ಮನೆಯಲ್ಲಿ ಕಳ್ಳತನ ಯಾವ ದಿನಾಂಕದಂದು ಆಯಿತ್ತು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು ದಿಃ 10-08-2016 ರಿಂದ 15-08-2016ರ ಒಳಗೆ ಆಗಿರುತ್ತದೆ ಎಂದು ನುಡಿಯುತ್ತಾರೆ.

ನಮ್ಮ ಮನೆಗೆ ಆರೋಪಿತರನ್ನು ದಿಃ 29-03-2017 ರಂದು ಯಾವ ಸಮಯಕ್ಕೆ ಕರೆದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ನಮ್ಮ ಮನೆಯಲ್ಲಿ ಕಳ್ಳತನ ಮಾಡಿದವರು ಯಾರು ಎಂದು ನನಗೆ ಮೊದಲೇ ಗೊತ್ತಿರಲಿಲ್ಲ. ಆರೋಪಿತರನ್ನು ನಮ್ಮ ಮನೆಗೆ ಕರೆತಂದಾಗ ಯಾವುದೇ ಪೊಟೋವನ್ನು ತೆಗೆದಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಮ್ಮ ಮನೆಯಲ್ಲಿ ಯಾವುದೇ ಕಳ್ಳತನ ಆಗದೆ ಇದ್ದರು ಸಹ

ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಕಳುವು ಮಾಡಿದ ವಸ್ತುಗಳನ್ನು ಚನ್ನಗಿರಿಯ ಐ ಐ ಎಫ್ ಎಲ್ ಗೋಲ್ಡ್ ಲೋನ್ ಕಚೇರಿಯಲ್ಲಿ ಅಡವಿಟ್ಟ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ನೋಡಿಲ್ಲ. ಸದರಿ ಪ್ರಕರಣಕ್ಕೂ, ಕಳುವಾದ ಮಾಲಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

02ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 619/2018**

| | |
|---|---|
| ಹೆಸರುಃ ಕುಮಾರ | ಚಾಸಾಃ 9 |
| ತಂದೆಯ  ಹೆಸರುಃ  ರಾಜು ಬಿ | ಪ್ರಾಸಾ:  7 |
| ವಯಸ್ಸುಃ  34  ವರ್ಷ | |
| ಉದ್ಯೋಗಃ  ಐ ಐ ಎಫ್ ಎಲ್  ಫೈನಾನ್ಸ್  ನಲ್ಲಿ ಕೆಲಸ | |
| ವಾಸ ಸ್ಥಳಃ ಭದ್ರಾವತಿ | |
| ಸಾಕ್ಷಿಗೆ ದಿನಾಂಕಃ 19-06-2023 ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಐ ಐ ಎಫ್ ಎಲ್ ಫೈನಾನ್ಸ್ ನಲ್ಲಿ ಕೆಲಸ 2014ರಿಂದ ಇಲ್ಲಿಯವರೆಗೂ ಕೆಲಸ ಮಾಡುತ್ತಿದ್ದೆನೆ.

2016ರಲ್ಲಿ 3ನೇ ಅರೋಪಿ ಮತ್ತು ಶಿಲ್ಪಾ ಎನ್ನುವವರು  ನಮ್ಮ ಫೈನಾನ್ಸ್ ನಲ್ಲಿ ಚಿನ್ನದ ಮೇಲೆ ಸಾಲವನ್ನು ಪಡೆದಿದ್ದರು. ಸದರಿ ಚಾಸಾ-10 ಶಿಲ್ಪಾ  ಎನ್ನುವವರ ಹೆಸರಿಲ್ಲಿ ಚೈನ್ ಮತ್ತು 3ನೇ ಆರೋಪಿ ಹೆಸರಲ್ಲಿ ನೆಕ್ಲೇಸ್ ನ್ನು ಅಡಮಾನ ಇಟ್ಟು ಲೋನ್ ನ್ನು ಪಡೆದಿರುತ್ತಾರೆ. ತದ ನಂತರ 2017ರಲ್ಲಿ ಕಂಪನಿ ನಿಯಾಮಾವಳಿ ಪ್ರಕಾರ ವಾಯಿದೆ ಮುಗಿದ ಕಾರಣ  ಸದರಿ ಚಿನ್ನಗಳು ಹರಾಜಿಗೆ ಹೋಗಿರುತ್ತದೆ. ತದ ನಂತರ 2017ರಲ್ಲಿ ಪೊಲೀಸರು ನಮ್ಮ ಫೈನಾನ್ಸ್ ಗೆ ಭೇಟಿ ಕೊಟ್ಟು ಕಳುವಾದ ಮಾಲುಗಳ ಬಗ್ಗೆ ತಿಳಿಸಿ ಸದರಿ ಮಾಲುಗಳನ್ನು ನಮ್ಮ ಫೈನಾನ್ಸ್ ನಲ್ಲಿ

ಅಡವಿಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ತದ ನಂತರ ಪೊಲೀಸರ ತಿಳಿಸಿದ ಚಿನ್ನಾಭರಣಗಳು ಹರಾಜು ಪ್ರಕ್ರಿಯೆಗೆ ಈಗಾಗಲೇ ಒಳಪಟ್ಟಿರುತ್ತದೆ. ತದ ನಂತರ ಪೊಲೀಸರ ಸದರಿ ಚಿನ್ನಾಭರಣಗಳನ್ನು ತಮ್ಮ ವಶಕ್ಕೆ ಪಡೆದುಕೊಳ್ಳಲು ಕೇಳಿದ್ದು ಆದರೆ ಪೈನಾನ್ಸ್ ನಿಯಾಮಾವಳಿ ಪ್ರಕಾರ ಒಮ್ಮೆ ಹರಾಜು ಪ್ರಕ್ರಿಯೇ ಒಳಪಟ್ಟಂತಹ ಆಭರಣಗಳನ್ನು ಹಿಂದಿರುಗಿಸುವುದಿಲ್ಲ ಎಂದು ಪೊಲೀಸರಿಗೆ ತಿಳಿಸಿರುತ್ತೇವೆ. ತದನಂತರ ಸದರಿ ವಿಷಯವನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದಾಗ ಮೇಲಾಧಿಕಾರಿಗಳು ಹರಾಜು ಪ್ರಕ್ರಿಯೆಯಲ್ಲಿ ಬಂದಂತಹ ಚಿನ್ನಾಭರಣಗಳ ಮೇಲಿನ ಮೊತ್ತವನ್ನು ಚೆಕ್ ಮೂಲಕ ಪೊಲೀಸರಿಗೆ ನೀಡುತ್ತೇವೆ ಎಂದು ಒಪ್ಪಿಕೊಂಡಿರುತ್ತಾರೆ. ಅದರಂತೆ ಚೆಕ್‌ಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇವೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ 3ನೇ ಆರೋಪಿ ಐ ಐ ಎಫ್ ಎಲ್ ಪೈನಾನ್ಸ್ ನಲ್ಲಿ ಅಡವಿಟ್ಟ ಆಭರಣದ sanction letterಯಾಗಿರುತ್ತದೆ. ಸದರಿ ದಾಖಲೆಯಲ್ಲಿ ಅಡವಿಳಿಟ್ಟ ಬಂಗಾರದ ನೆಕ್ಲೆಸ್ ನ ಪೋಟೋ ಮತ್ತು ಅಡವಿಟ್ಟವರ ಭಾವಚಿತ್ರ ಇದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ-8ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

3ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 3 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ**

**ಪರಿಗಣಿಸಲು ಕೇಳಿಕೊಂಡಿದ್ದು, ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ದಿಃ 21-04-2017 ರಂದು ಚನ್ನಗಿರಿ ಪೊಲೀಸ್ ಠಾಣೆಯವರು ನಮ್ಮ ಕಂಪನಿಗೆ ಆರೋಪಿ ಅಡ ಇಟ್ಟಿರುವ ಬಂಗಾರದ ಅಭರಣಗಳ ವಿವರಗಳನ್ನು ಕೇಳಿ ಪತ್ರ ಬರೆಯುದಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು - 3ನೇ ಆರೋಪಿ ಪರ ಶ್ರೀ ಹೆಚ್ ಟಿ ವಕೀಲರಿಂದ –</u>**

ನಾನು ಐಐಎಫ್ಎಲ್ ಪೈನಾನ್ಸ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಪೊಲೀಸರಿಗೆ ಯಾವುದೇ ಗುರುತಿನ ಚೀಟಿಯನ್ನು ಕೊಟ್ಟಿರುವುದಿಲ್ಲ. ಹಾಗಾಗಿ ಸದರಿ ಕಂಪನಿಯಲ್ಲಿ ಕೆಲಸ ಮಾಡದೇ ಇದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಬ್ಯಾಂಕಿನಲ್ಲಿ ಯಾವುದೇ ವ್ಯಕ್ತಿ ವ್ಯವಹಾರ ಮಾಡುವಾಗ ನಮ್ಮ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದು ವ್ಯವಹಾರ ಪ್ರಾರಂಭಿಸಬೇಕಾಗುತ್ತದೆ ಎಂದರೆ ಸರಿ. ಸದರಿ ಖಾತೆಯನ್ನು ಪ್ರಾರಂಭಿಸುವಾಗ ಅರ್ಜಿದಾರರ ಗುರುತಿನ ಬಗ್ಗೆ ಅಧಾರ ಕಾರ್ಡ್, ಚುನಾವಣಾ ಗುರುತಿನ ಚೀಟಿಯಂತಹ ಇತರೆ ದಾಖಲೆಗಳನ್ನು ಪರಿಶೀಲಿಸುತ್ತೇವೆ ಎಂದರೆ ಸರಿ. ಖಾತೆ ಪ್ರಾರಂಭಿಸುವಾಗ ಅರ್ಜಿದಾರರು(3ನೇ ಅರೋಪಿ) ನೀಡಿದ ಗುರುತಿನ ಚೀಟಿಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇವೆ ಎಂದರೆ ಸರಿ. ಅರ್ಜಿದಾರರ ವಿಳಾಸವನ್ನು ಅರ್ಜಿಯಲ್ಲಿ ನಮೂದು ಮಾಡುವುದಿಲ್ಲ ಆದರೆ ಅಧಾರ್ ಕಾರ್ಡ್ ನ್ನು ನೋಡಿ ಕಂಪ್ಯೂಟರ್ ನಲ್ಲಿ ನೇರವಾಗಿ ನಮೂದಿಸುತ್ತೇವೆ. ಸದರಿ ಕಂಪ್ಯೂಟರ್ ನಲ್ಲಿ ನಮೂದಿಸಿದ ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿದ್ದಿರ ಎಂದರೆ ಸಾಕ್ಷಿ ನಾವು ಆಧಾರ್

ಕಾರ್ಡ್  ಮತ್ತು ನಿಪಿ-8 ನ್ನು ಕಂಪ್ಯೂಟರ್ ನಿಂದಲೇ ಪ್ರಿಂಟ್ ತೆಗೆದು ಪೊಲೀಸರ ವಶಕ್ಕೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಅರ್ಜಿದಾರರಿಗೆ ಅವರ ವಿಳಾಸವಿರುವ ಯಾವುದೇ ಅರ್ಜಿಯನ್ನು ಕೊಡುವುದಿಲ್ಲ. ನಾವು ಕೊಟ್ಟಿರುವ ನಿಪಿ-8ರಲ್ಲಿ ಅರ್ಜಿದಾರರ ವಿಳಾಸ ಇರುವುದಿಲ್ಲ.

ನಾವು 3 ನೇ ಅರೋಪಿಯಿಂದ ಪಡೆದ ಗುರುತಿನ ಚೀಟಿಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇವೆ. ಸಾಕ್ಷಿಗೆ ಈಗ ಕಡತವನ್ನು ತೋರಿಸಲಾಗಿ ಸದರಿ ಕಡತವನ್ನು ಪರಿಶೀಲಿಸಿ ನಾವು ಸಲ್ಲಿಸಿರುವ ದಾಖಲೆಗಳು ಕಡತದಲ್ಲಿ ಇಲ್ಲದೆ ಇರುವುದನ್ನು ಖಚಿತಪಡಿಸಿಕೊಂಡಿರುತ್ತಾರೆ. ನಿಪಿ-8ರಲ್ಲಿ ನಮೂದಿಸಿರುವಂತೆ  3ನೇ ಅರೋಪಿಯೇ ಬಂದು ಚಿನ್ನವನ್ನು ಅಡವಿಟ್ಟ ಬಗ್ಗೆ ಸದರಿ ನಿಪಿ-8ರಲ್ಲಿ ಯಾವುದೇ ಆಧಾರ್ ನಂಬರ್ ಆಗಲಿ 3 ನೇ ಅರೋಪಿಯ ವಿಳಾಸವಾಗಿಲಿ ಅಥವಾ ಇರತರೆ ಗುರುತುಗಳನ್ನುನಮೂದಿಸಿಲ್ಲ ಎಂದರೆ ಸರಿ. ಹಾಗಾಗಿ ನಾನು ಹೇಳಲಾದ ದಿನ 3ನೇ ಅರೋಪಿ ಯಾವುದೇ ಚಿನ್ನವನ್ನು ನಮ್ಮ ಬಾಂಕಿನಲ್ಲಿಅಡವಿಟ್ಟಿಲ್ಲ ಎಂದರೆ ಸಾಕ್ಷಿ 3ನೇ ಅರೋಪಿ ಹಾಜರಿದ್ದು ಅವರಿಂದ ವಿವರವನ್ನು ಗಣಕೀಕರಣ ಗೊಳಿಸಿ ನಂತರ ಆತನು ನೀಡಿರುವ ಮೊಬೈಲ್ ನಂಬರಿಗೆ    ಓ ಟಿ ಪಿ ಬಂದ ನಂತರವಷ್ಟೆ ನಾವು ಚಿನ್ನವನ್ನು ಅಡವಿಟ್ಟುಕೊಳ್ಳುತ್ತೇವೆ ಎಂದು ನುಡಿಯುತ್ತಾರೆ.

3ನೇ ಅರೋಪಿ ನೀಡಿರುವ ಮೊಬೈಲ್ ನಂಬರು ನನಗೆ ಗೊತ್ತಿಲ್ಲ. ಆದರೆ ನಿಪಿ-8ರಲ್ಲಿ ನಮೂದು ಇರುತ್ತದೆ.  3 ನೇ ಅರೋಪಿ ಯಾವುದೇ ಮೊಬೈಲ್ ನಂಬರನ್ನಾಗಲಿ ಅಥವಾ ಓ ಟಿ ಪಿ ಯನ್ನಾಗಲಿ ನಮಗೆ ಕೊಟ್ಟಿಲ್ಲದೆ ಇದ್ದರು ಸಹ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಓ ಟಿ ಪಿ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

ಸಾಮಾನ್ಯವಾಗಿ ಚಿನ್ನವನ್ನು ಅಡಮಾನ ಇಡುವ ಕಾಲಕ್ಕೆ ಒಂದು ಮೊಬೈಲ್ ನಂಬರನ್ನು ಪಡೆದುಕೊಂಡಿರುತ್ತೇವೆ. ಗ್ರಾಹಕರಿಗೆ ನೀಡುವ ರಶೀದಿಯಲ್ಲದೆ ಮತ್ತೊಂದು ಸದರಿ ರಶೀದಿಯ ಪ್ರತಿ ನಮ್ಮ ಕಚೇರಿಯಲ್ಲೂ ಸಹ ಇರುತ್ತದೆ ಎಂದರೆ ಸರಿ. ಸದರಿ ಮುದ್ರಿತ ರಶೀದಿಯನ್ನು ಯಾವ ದಿನಾಂಕದಂದು 3ನೇ ಅರೋಪಿಗೆ ಕೊಟ್ಟೆ ಎಂದು ನನಗೆ ನೆನಪಿಲ್ಲ. ಆದರೆ ನಿಪಿ-8ರಲ್ಲಿ ಉಲ್ಲೇಖವಿರುತ್ತದೆ.

ಅಡಮಾನವಿಟ್ಟ ಚಿನ್ನದ ಪರೀಕ್ಷೆ ಮತ್ತು ತೂಕವನ್ನು ಮಾಡುವ ಪರಿಣತಿ ನಾನು ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಚಿನ್ನದ ಪರಿಣಿತಿ ಪಡೆದ ಕುರಿತು ನಾನು ಯಾವುದೇ ದಾಖಲೆಯನ್ನು ಒದಗಿಸಿಲ್ಲ. ಹಾಗಾಗಿ ನಾನು ಯಾವುದೇ ಪರಿಣತಿಯನ್ನು ಪಡೆಯದೆ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. 3ನೇ ಅರೋಪಿ ಯಾರೊಂದಿಗೆ ಬಂದರು ಮತ್ತು ಅವರ ವಿಳಾಸವನ್ನು ನನಗೆ ಹೇಳಲಾಗುವುದಿಲ್ಲ, ಅದರೆ ಸದರಿ ವಿಳಾಸ ಆಧಾರ್ ಕಾರ್ಡ್ ನಲ್ಲಿ ನಮೂದು ಇರುತ್ತದೆ. ಹಾಗಾಗಿ 3 ನೇ ಆರೋಪಿ ಮತುತ ಚಾಸಾ-10 ರವರು ನಮ್ಮ ಕಚೇರಿಗೆ ಬರದೇ ಇದ್ದರು ಸಹ ನಾನು ಅವರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

3ನೇ ಅರೋಪಿ ಚಿನ್ನವನ್ನು ಅಡಮಾನವಾಗಿಟ್ಟು ಪಡೆದ ಸಾಲದ ಹಣದ ಮುಖ ಬೆಲೆಯನ್ನು ನನಗೆ ಹೇಳಲಾಗುವುದಿಲ್ಲ. ಸದರಿ ಹಣವನ್ನು ನಾನು ಕೈ ಯಾರೆ ಎಣಿಸಿಕೊಟ್ಟಿರುವುದಿಲ್ಲ ಆದರೆ ಕ್ಯಾಶ್ ವಿತರಕರು ಬೇರೆ ಕ್ಯಾಶಿಯರ್ ಇರುತ್ತಾರೆ. ಹಾಗಾಗಿ ಕ್ಯಾಶಿಯರ್ ರವರು ಹಣವನ್ನು ಕೊಟ್ಟ ಕಾರಣ ನನಗೆ ಹಣದ ಮುಖ ಬೆಲೆಯನ್ನು ಹೇಳಲಾಗುವುದಿಲ್ಲ ಎಂದರೆ ಸರಿ. ಸಾಕ್ಷಿ

ಮುಂದುವರೆದು ಆದರೆ ಸಾಲ ಎಷ್ಟು ಕೊಟ್ಟಿವು ಎಂದು ನನಗೆ ಗೊತ್ತಾಯಿತು ಎಂದು ನುಡಿಯತ್ತಾರೆ. ಹಾಗಾಗಿ ಸದರಿ ಹಣದ ಮುಖ ಬೆಲೆಯನ್ನು ಹೇಳಲಾಗದ ಕರಣ 3ನೇ ಅರೋಪಿ ಮತ್ತು ಚಾಸಾ-10 ರವರಿಗೆ ಯಾವುದೇ ಸಾಲವನ್ನು ವಿತರಿಸಿಲ್ಲ ಎಂದರೆ ಸರಿಯಲ್ಲ. 3ನೇ ಅರೋಪಿ ಮತ್ತು ಚಾಸಾ-10 ರವರ ಖಾತೆ ನಂಬರ ನ್ನು ಹೇಳಲಾಗುವುದಿಲ್ಲ. 3ನೇ ಅರೋಪಿ ಮತ್ತು ಚಾಸಾ-10 ರವರು ನಮ್ಮ ಕಂಪನಿಯಲ್ಲಿ ಖಾತೆಯನ್ನು ತೆರೆದ ನಿರ್ದಿಷ್ಟ ದಿನಾಂಕವನ್ನು ನನಗೆ ಹೇಳಲಾಗುವುದಿಲ್ಲ. ಸಾಮಾನ್ಯವಾಗಿ ಅಡವಿಟ್ಟ ಚಿನ್ನಾಭರಣಗಳನ್ನು ಬಿಡಿಸಿಕೊಳ್ಳಲು 6 ತಿಂಗಳು ಗಡುವು ಇರುತ್ತದೆ 3ನೇ ಅರೋಪಿ ಮತ್ತು ಚಾಸಾ-10 ರವರು ಅಡಮಾನವಾಗಿ ಇಟ್ಟಿರುವ ಚಿನ್ನಾಭರಣಗಳ ವಾಯಿದೆ ಯಾವಾಗ ಮುಗಿಯಿತು ಎಂದು ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ.

ಹರಾಜು ಹಾಕಿದ ಪ್ರಕ್ರಿಯೆ ದಿನದಂದು ಸ್ಧಳದಲ್ಲಿ ಹರಾಜುದಾರರಿಗೆ ಚಿನ್ನವನ್ನು ಹಸ್ತಾಂತರಿಸುತ್ತೇವೆ ಎಂದರೆ ಸರಿ. ಪೊಲೀಸರು ನಮ್ಮ ಕಚೇರಿಗೆ 3ನೇ ಅರೋಪಿ ಮತ್ತು ಚಾಸಾ-10 ರವರು ಅಡವಿಟ್ಟ ಚಿನ್ನಾಭರಣಗಳನ್ನು ಯಾವುದೇ ರೀತಿ ವಿಲೇವಾರಿ ಮಾಡಬಾರದು ಎಂಬ ಪತ್ರವನ್ನು ನಮ್ಮ ಕಂಪನಿಗೆ ಯಾವ ದಿನಾಂಕದಂದು ಬಂತು ಎಂದು ನನಗೆ ಗೊತ್ತಿಲ್ಲ. ಹಾಗಾಗಿ ಪೊಲೀಸರು ಈ ಕುರಿತು ಯಾವುದೇ ಪತ್ರ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಪತ್ರ ವ್ಯವಹಾರದ ಕುರಿತು ನಮ್ಮ ಕಂಪನಿಯವರು ಪೊಲೀಸಿನವರಿಗೆ ದಾಖಲಾತಿಯನ್ನು ಕೊಟ್ಟಿರುತ್ತಾರೆ. ಸದರಿ ಪತ್ರ ವ್ಯವಹಾರದ ಬಗ್ಗೆ ನನಗೆ ಗೊತ್ತಿದೆ ಆದರೆ ಈ ಪ್ರಕರಣದಲ್ಲಿ ಅವನ್ನು ಹಾಜರಪಡಿಸಿಲ್ಲ. ನಿಪಿ-8ರಲ್ಲಿ ನಮ್ಮ ಕಂಪನಿಯ ಮೊಹರು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರಲ್ಲಿ ನನನ ಸಹಿ ಇದೆ ಎಂದು

ನುಡಿಯುತ್ತಾರೆ. ನಾನು ನಿಪಿ8ರಲಸಿ್ಲಿತೋರಿಸಿದ ಕಂಪನಿಯ ಶಾಖಾ ವ್ಯವಸ್ಥಾಪಕರು ಅಲ್ಲ ಎಂದರೆ ಸರಿ. ನಾನು ನಿಪಿ-8ರಲ್ಲಿ ಬಾಂ ಕ್ ಮ್ಯಾನೇಜರ್ ಎಂದು ನಮೂದು ಇರುವ ಕಡೆ ನನ್ನ ಸಹಿಯನ್ನು ಮಾಡಿರುತ್ತೇನೆ ಎಂದರೆ ಸಾಕ್ಷಿ ಬಾಂಕ್ ಮಾನೇಜರ್ ಸದರಿ ದಿನದಂದು ಗೈರು ಹಾಜರಾದಕರಣ ಸದರಿಯವರ ಪರವಾಗಿ ನಾನು ಸಹಿ ಮಾಡಿರುತ್ತೇನೆ ಎಯಿ ನುಡಿಯುತ್ತಾರೆ. ನನಗೆ ಬಾಂನಕ್ ಮಾನೇಜರ್ ರವರ ಗೈರು ಹಾಜರಿದ್ದ ಸಮಯದಲ್ಲಿ ಸಹಿ ಮಾಡಲು ಅಧಿಕೃತ ಪರವಾನಿಗೆಯನ್ನು ಕೊಟ್ಟಿರುವುದಿಲ್ಲ. ಹಾಗಾಗಿ ಸದರಿ ನಿಪಿ-8 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿ ಪೊಲೀಸರಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಹಾಗಾಗಿ 3ನೇ ಅರೋಪಿ ಮತ್ತು ಚಾಸಾ-10 ರವರು ನಾನು ಹೇಳಿದಂತೆ ನಮ್ಮ ಕಂಪನಿಯಲ್ಲಿ ಯಾವುದೇ ಅಡಮಾನವನ್ನು ಇಡದೆ ಇದ್ದರು ಸಹ ಆರೋಪಿತರ ವಿರುದ್ದ ನಿಪಿ-8ನ್ನು ಸೃಷ್ಟಿ ಮಾಡಿ ಆರೋಪಿಗೆ ತೊಂದರೆಕೊಡುವ ದೃಷ್ಟಿಯಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ನಿಪಿ-8 ರಲ್ಲಿ ತೋರಿಸಿರುವ ನೆಕ್ಲೇಸ್‌ನ ಪೊಟೋಗೂ 3ನೇ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರದಲ್ಲಿ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಪೊಲೀಸರೊಂದಿಗೆ ಶಾಮೀಲಾಗಿ ನಿಪಿ-8ನ್ನು ಸೃಷ್ಟಿ ಮಾಡಿ ನನ್ನ ಅನುಕೂಲಕ್ಕೆ ತಕ್ಕಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**